**ವಿಜ್ಞಾನ ಮೇಳ -2005**

ಬೆಂಗಳೂರು, ಅಕ್ಟೋಬರ್ 25, 2005

ವಿದ್ಯಾರ್ಥಿ ಸಮುದಾಯ ಹಾಗೂ ಸಾರ್ವಜನಿಕರಲ್ಲಿ ವಿಜ್ಞಾನದ ಹೆಚ್ಚಿನ ಅರಿವು ಮೂಡಿಸುವುದಕ್ಕಾಗಿ ನಗರದ ವಿಶ್ವೇಶ್ವರಯ್ಯ ಕೈಗಾರಿಕಾ ಹಾಗೂ ತಾಂತ್ರಿಕ ವಸ್ತು ಸಂಗ್ರಹಾಲಯವು ಬರುವ ನವೆಂಬರ್ 7ರಿಂದ 11ರವರೆಗೆ ವಿಜ್ಞಾನ ಮೇಳ -2005ನ್ನು ಹಮ್ಮಿಕೊಂಡಿದೆ. ಭಾಗವಹಿಸುವ ಸಂಸ್ಥೆಗಳಿಂದ ವಸ್ತುಪ್ರದರ್ಶನವಲ್ಲದೆ ವಿವಿಧ ಕಾರ್ಯಕ್ರಮ ಹಾಗೂ ಸ್ಪರ್ಧೆಗಳನ್ನು ವಿದ್ಯಾರ್ಥಿ, ಶಿಕ್ಷಕರು ಹಾಗೂ ಸಾರ್ವಜನಿಕರಿಗೆ ಏರ್ಪಡಿಸಲಾಗುವುದು. 5 ದಿನಗಳ ಈ ಮೇಳದಲ್ಲಿ ಭಾಗವಹಿಸುವ ವಿವಿಧ ಸಂಸ್ಥೆಗಳು, ದೇಶದಲ್ಲಿನ ಇತ್ತೀಚಿನ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಸಂಶೋಧನೆ ಹಾಗೂ ಪ್ರಗತಿಯನ್ನು ಬಿಂಬಿಸುವ ಮಳಿಗೆಗಳನ್ನು ರಚಿಸಲಿವೆ.

ಈ ಕುರಿತ ಸ್ಪರ್ಧೆಗಳಲ್ಲಿ ಭಾಗವಹಿಸಲಿಚ್ಛಿಸುವವರು ಅಕ್ಟೋಬರ್ 31, 2005ರೊಳಗೆ ನೊಂದಾಯಿಸಿಕೊಳ್ಳಬಹುದು. ಅರ್ಜಿಗಳನ್ನು www.vismuseum.org ಯಲ್ಲಿ ಪಡೆಯಬಹುದು. ಅಲ್ಲದೆ ಹೆಚ್ಚಿನ ವಿವರಗಳನ್ನು ವಿಶ್ವೇಶ್ವರಯ್ಯ ಕೈಗಾರಿಕಾ ಹಾಗೂ ತಾಂತ್ರಿಕ ವಸ್ತು ಸಂಗ್ರಹಾಲಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 22864563, 22864009 ಹಾಗೂ 22865823ಗಳಲ್ಲಿ ಪಡೆಯಬಹುದಾಗಿದೆ.

******

ಅದ:ಪಚ:ಪಿಜಿಪಿ:ಟಿ.ಎಂ.ಎಸ್: ಬೆಂ:15:50 25-10-2005